ಮೈಸೂರ ಗೆಜೆಟ್ಟು.

ಸಂ. 42.] ಸರ್ಕಾರದಿಂದ ಪ್ರಾಯುಕ್ತ ಆಜ್ಞೆ. [ನಂ. 47.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 28, ಸ॥ 1907.

II ನೆ ಭಾಗ

ಇಂಡ್ಯೂಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್, 1907ನೆ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲಿಯಾನು ನಡಿಯುತ್ತಿರುವ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಆದರದರ ಒಜಾದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕವಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಸುಮಾರು ವಜ್ಜ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ..	18ನೆ ನವೆಂಬರ್ 1907.	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ ..	ಶಿವಮೊಗ್ಗ ...	25ನೆ ಡಿಟೋ ...	500
ಈಡೂರು ..	ತರೀಕೆರೆ ...	28ನೆ ಡಿಟೋ ...	250
ಡಿಟೋ ..	ಚಿಕ್ಕಮಗಳೂರು ..	2ನೆ ಡಿಸೆಂಬರ್ 1907 ..	350
ಹಾಸನ ..	ಹಾಸನ ...	5ನೆ ಡಿಟೋ ..	150
ಬೆಂಗಳೂರು ..	ಬೆಂಗಳೂರು ...	9ನೆ ಡಿಟೋ ..	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ..	50
ಡಿಟೋ ...	ಹುಣಸೂರು ...	16ನೆ ಡಿಟೋ ..	500
		ಜುಮ್ಲಾ ...	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಲಾಸುವಾರು ಲಟ್ಟು, ಪೊತ್ತ ಮತ್ತು ಇತರ ತಪಶೀಲುಗಳು ಒರುವ ಅಕ್ಟೋಬರ್ ಮಾಹೆಯ ಆಖ್ಯೆರಿಯಲ್ಲಿ ತೀರ್ಮಾನಪಡಿಸತ್ತೆ.

ಎಂ. ಮುದ್ದಣ್ಣ,
ಕಂಸರ್ವೇಟರ್ ಆಫ್ ಫಾರೆಸ್ಟ್ಸ್, ಜಿ॥ ಮೈಸೂರು.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 17ನೆ ಮಾಹೆ ನವಂಬರು 1907.

ಸ॥ 1908ನೆ ಇಸವಿ ಜನವರಿ ಮಾಹೆ 16ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ, ಎಡತೊರೆ ತಾಲ್ಲೂಕು ಚಂಚನಕಟ್ಟೆಯಲ್ಲಿ ನಡಿಯುವ ಶ್ರೀರಾಮಚಂದ್ರಸ್ವಾಮಿಯವರ ರಥೋತ್ಸವ ಕಾಲದಲ್ಲಿ 4ಗಾಲ್ವೆಯಿಂದ ತಲಬರುವ ವರ್ಕ್ಸ್ ನಂ. 2585-95—L. B. (46)-06) -3ನೆ ನಂಬರು ಪ್ರೊಸೀಡಿಂಗ್ಸ್‌ನ ಪ್ರಕಾರ ದನಗಳ ಪ್ರದರ್ಶನವೂ ನಡಿಯುತ್ತೆ.

ಬಾಕಿ ತಪಶೀಲುಗಳಿಗೆಲ್ಲಾ 1907ನೆ ನವೆಂಬರ್ 21ನೆ ವರ್ಕ್ಸ್ ನಂ. 46ನೆ ನಂಬರು ಮೈಸೂರು ಗೆಜೆಟ್ಟಿನ ನೆ ಭಾಗದ 345ನೆ ನಂಬರು ಪುಟದಲ್ಲಿ ನೋಡಬೇಕು.